ಬೈಲಹೊಂಗಲ	9
ಆಥಣಿ	3
ನಿಪ್ಪಾಣಿ	1
ಗೋಕಾಕ್	5
ಹಳಿಯಾಳ	1
ಸಿದ್ದಾಪುರ	3
ಜಮಖಂಡಿ	4
ತಾಳಿಕೋಟಿ	4
ಮಾಹಲಿಂಗಪುರ	18
ಹುನಗುಂದ	1
ಭಾಗಲಕೋಟಿ	17
ಬಾದಾಮಿ	1

ಒಟ್ಟು	80	ಒಟ್ಟು	221

80 + 221 - 301

ಕೈಗಾರಿಕಾ ಸಹಕಾರ ಸಂಘಗಳ ಬಗ್ಗೆ

2364 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸಹಕಾರ ಸಂಘಗಳನ್ನು ಕೈಗಾರಿಕಾ ಸಹಕಾರ ಸಂಘಗಳು ಮತ್ತು ಕೈಗಾರಿಕಾ ಹೊರತುಪಡಿಸಿದ ಸಹಕಾರ ಸಂಘಗಳೆಂದು ಯಾವ ದಿನಾಂಕದಿಂದ ವಿಂಗಡಿಸಲಾಗಿದೆ.

ಆ) ರಾಜ್ಯದಲ್ಲಿರುವ ಕೈಗಾರಿಕಾ ಸಹಕಾರ ಸಂಘಗಳೆಷ್ಟು. ಇದರ ಉಸ್ತುವಾರಿ ನೋಡಿಕೊಳ್ಳುವ ಇಲಾಖೆಯಾವುದು.

ಇ) ರಾಜ್ಯದಲ್ಲಿ ಕೈಗಾರಿಕಾ ಸಹಕಾರ ಸಂಘಗಳೆಂದು ಬೇರ್ಪಡಿಸಿ. ಕೈಗಾರಿಕಾ ಇಲಾಖೆ ವರ್ಗಾಯಿಸಿದ್ದರು ಇನ್ನೂ ಅನೇಕ ಕೈಗಾರಿಕಾ ಸಹಕಾರ ಸಂಘಗಳ ಸಹಕಾರ ಇಲಾಖೆಯ ಅಧೀನದಲ್ಲಿ ಎಷ್ಟಿವೆ.

ಈ) ದಾವಣಗೆರೆ ಆಟೋಮೊಬೈಲ್ ಕೈಗಾರಿಕಾ ಸಹಕಾರ ಸಂಘವು ಕೈಗಾರಿಕಾ ಇಲಾಖೆಗೆ ವರ್ಗಾಯಿಸಿದ್ದರೂ ಸಹಕಾರ ಇಲಾಖೆಯ ಅಧೀನದಲ್ಲಿರಲು ಕಾರಣವೇನು.

ಉ) ಬೈಲಾದಲ್ಲಿ ಕಾರ್ಯದರ್ಶಿಯ ಹುದ್ದೆಯನ್ನು ಸರ್ಕಾರದ ಪ್ರತಿನಿಧಿ ಎಂದು ತೀರ್ಮಾನಿಸದೆ ಇದ್ದರೂ ಆದರೂ ಇಲಾಖೆಯ ಪ್ರಭಾರ ಕಾರ್ಯದರ್ಶಿಯಾಗಿ ನೇಮಿಸಿರುವ ಉದ್ದೇಶವೇನು ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಸಹಕಾರ ಸಂಘಗಳನ್ನು ನೋಂದಣಿ ಮಾಡುವಾಗಲೇ ಕೈಗಾರಿಕಾ ಸಹಕಾರಿ ಸಂಘಗಳು ಮತ್ತು ಇತರೆ ಸಂಘಗಳೆಂದು ಗುರುತಿಸಲಾಗುವುದು. ಸಹಕಾರ ಸಂಘಗಳ ಕಾಯ್ದೆ ಮತ್ತು ನಿಬಂಧನೆಗಳ ಅಧಿಕಾರವನ್ನು ಈ ಕೆಳಗಿನ ಸರ್ಕಾರದ ಅಧಿಸೂಚನೆಗಳಂತೆ ವಿವಿಧ ಅಧಿಕಾರಿಗಳಿಗೆ ಪ್ರತ್ಯಾಯೋಜನೆ ಮಾಡಲಾಗಿದೆ. (ಡೆಲಿಗೇಷನ್ ಆಫ್ ಪವರ್ಸ್) ಸಿಎಂಡಬ್ಲ್ಯೂ 243 ಸಿಎಲ್‌ಎಂ 91 ದಿ. 4-5-94.

ಆ) 1401 ಕೈಗಾರಿಕಾ ಸಂಘಗಳಿವೆ

ಅಧಿಕಾರ ಪ್ರತ್ಯಾಯೋಜನೆಯು :

ಜವಳಿ, ಆಯುಕ್ತರು, ಸಕ್ಕರೆ ನಿರ್ದೇಶಕರು, ಅಪರ ನಿರ್ದೇಶಕರು (ಕೈಗಾರಿಕೆ ಮತ್ತು ವಾಣಿಜ್ಯ) ಹಾಗೂ ಪದನಿಮಿತ್ತ ಅಪರ ನಿಬಂಧಕರು, ಕೈಗಾರಿಕಾ ಸಹಕಾರ ಸಂಘಗಳು ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಇರುತ್ತದೆ.

ಅಪರ ನಿರ್ದೇಶಕರು - ಕೈಗಾರಿಕೆ ಮತ್ತು ಮಾರಾಟ) ಹಾಗೂ ಪದನಿಮಿತ್ತ ಅಪರ ನಿಬಂಧಕರು ಕೈಗಾರಿಕಾ ಸಹಕಾರ ಸಂಘಗಳು	ಖಾದಿ ಮತ್ತು ಗ್ರಾಮೋದ್ಯೋಗ ಹ್ಯಾಂಡಿಕ್ರಾಫ್ಟ್ಸ್, ಸಹಕಾರ ಸಂಘಗಳು ಹಾರ್ಟಿಜನ್ ಸಹಕಾರ ಸಂಘಗಳು, ಬೀಡಿ ಕಾರ್ಮಿಕರ ಸಹಕಾರ ಸಂಘಗಳು ಮತ್ತು ಕಾಯರ್ ಸಹಕಾರ ಸಂಘಗಳು
ಜವಳಿ ಆಯುಕ್ತರು -	ನೂಲಿನ ಗಿರಣಿಗಳು ಮತ್ತು ನೇಕಾರರ ಸಹಕಾರ ಸಂಘಗಳು
ಸಕ್ಕರೆ ನಿರ್ದೇಶಕರು -	ಸಹಕಾರ ಸಕ್ಕರೆ ಕಾರ್ಖಾನೆಗಳು

ಮೇಲೆ ವಿವರಿಸಿರುವ ಸಹಕಾರ ಸಂಘಗಳನ್ನು ಹೊರತುಪಡಿಸಿ, 553 (ಐದು ನೂರು ಐವತ್ತಮೂರು) ಸಹಕಾರ ಸಂಘಗಳು ಸಹಕಾರ ಇಲಾಖೆಯ ವ್ಯಾಪ್ತಿಯಲ್ಲಿ ಮುಂದುವರಿದಿವೆ.

ಪ್ರಶ್ನೆ 'ಇ' ನಲ್ಲಿ ಈಗಾಗಲೇ ಬೇರೆ ಬೇರೆ ಅಧಿಕಾರಿಗಳಿಗೆ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಬಂಧನೆಗಳನ್ನು ಅಧಿಕಾರ ಪ್ರತ್ಯಾಯೋಜನೆ ಮಾಡಿರುವುದನ್ನು ವಿವರಿಸಲಾಗಿದೆ.

ವಿವರಿಸಿರುವ ಸಂಘಗಳನ್ನು ಹೊರತುಪಡಿಸಿ, ಇತರೆ ಸಹಕಾರ ಸಂಘಗಳು ಸಹಕಾರ ಇಲಾಖೆಯ ವ್ಯಾಪ್ತಿಯಲ್ಲಿಯೇ ಉಳಿದುಕೊಂಡಿದೆ. ಹೀಗೆ ಉಳಿದುಕೊಂಡಿರುವ ಸಂಘಗಳ ಪೈಕಿ ದಾವಣಗೆರೆ ಆಟೋಮೊಬೈಲ್ ಕೈಗಾರಿಕಾ ಸಹಕಾರ ಸಂಘ ಒಂದು.

ಈ ಸಂಘದ ಆಡಳಿತ ಮಂಡಳಿಯನ್ನು ಸಹಕಾರ ಸಂಘಗಳ ಕಾಯ್ದೆ ಕಲಂ 30 ಎ ಪ್ರಕಾರ ರದ್ದುಪಡಿಸಿ ವಿಶೇಷಾಧಿಕಾರಿಯನ್ನು ನೇಮಿಸಿದ್ದಾಗ, ಈ ಸಂಘದ ಕಾರ್ಯ ಚಟುವಟಿಕೆಗಳನ್ನು ನೋಡಿಕೊಳ್ಳಲು ಇಲಾಖೆಯ ಸಹಕಾರಿ ಅಭಿವೃದ್ಧಿ ಅಧಿಕಾರಿಯ ಶ್ರೇಣಿಯ ಒಬ್ಬರನ್ನು ಈ ಸಂಘದ ಹುದ್ದೆಯ ಅಧಿಕ ಪ್ರಭಾರದಲ್ಲಿರಿಸಲಾಗಿತ್ತು. ಈಗ ದಿನಾಂಕ 23-8-94 ರಿಂದ ದಾವಣಗೆರೆ ಒಂದನೇ ವೃತ್ತದ ಸಹಕಾರಿ ವಿಸ್ತರಣಾಧಿಕಾರಿಯವರನ್ನು ಅಧಿಕ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಆಡಳಿತ ಮಂಡಳಿ ಚುನಾವಣೆಯಾದ ನಂತರವೂ ಈ ವ್ಯವಸ್ಥೆ ಮುಂದುವರಿದಿದೆ.

ಗೋಕಾಕ್ ತಾಲ್ಲೂಕಿನಲ್ಲಿ ಕಂದಾಯ ಪಡ ಜಮೀನಿನ ಪರಭಾರೆ,

2059 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ ನಗರ ಹಾಗೂ ತಾಲ್ಲೂಕಿನಲ್ಲಿರುವ ಒಟ್ಟು ಕಂದಾಯ ಪಡಾ ಜಮೀನು ಎಷ್ಟು?

ಆ) ಗೋಕಾಕ ನಗರದಲ್ಲಿರುವ ಕಂದಾಯ ನಿರುಪಯೋಗಿ ಜಮೀನನ್ನು 1995 ಜನವರಿಯಿಂದ ಪರಭಾರೆ ಮಾಡಿದ ಒಟ್ಟು ಜಮೀನು ಎಷ್ಟು.

ಇ) ಗೋಕಾಕ ನಗರದ ಕಾಲೇಜೊಂದಕ್ಕೆ ಹೊಂದಿಕೊಂಡಂತೆ ಇರುವ 9 ಎಕರೆ 15 ಗುಂಟೆ ಜಮೀನನ್ನು ಶಿಕ್ಷಣ ಸಂಸ್ಥೆಗೆ ವಹಿಸಿಕೊಟ್ಟದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ.